ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು 1 ನೇ ಅಧಿಕ ಜೆಎಂಎಫ್‌ಸಿ ನ್ಯಾಯಾಲಯ

ರಾಣೇಬೆನ್ನೂರು.

ಸಿ.ಸಿ.ಸಂಖ್ಯೆಃ 151/2023

**ಪಿ ಡಬ್ಲ್ಯೂಃ 1**

ಸಿ ಡಬ್ಲ್ಯೂಃ 1

| | | |
|---|---|---|
| ಸಾಕ್ಷಿಯ ಹೆಸರು | : | ಶಂಕರ್ |
| ತಂದೆಯ ಹೆಸರು | : | ಮಹದೇವ ಗುಡದಾರ |
| ವಯಸ್ಸು | : | 36 |
| ಉದ್ಯೋಗ | : | ಅಬಕಾರಿ ನಿರೀಕ್ಷಕರು |
| ವಾಸಸ್ಥಳ | : | ರಾಣೇಬೆನ್ನೂರು |

ದಿನಾಂಕಃ 03-06-2024 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ**

ದಿನಾಂಕ 25-11-2020 ರಿಂದ ದಿಃ 03-02-2024 ರವರೆಗೆ ರಾಣೇಬೆನ್ನೂರು ಅಬಕಾರಿ ಉಪ ಅಧೀಕ್ಷಕರ ಕಚೇರಿಯಲ್ಲಿ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

2. ವಿಧಾನ ಸಭೆ ಚುನಾವಣೆ 2023 ರ ನೀತಿ ಸಂಹಿತೆ ಜಾರಿಯಲ್ಲಿದ್ದ ಸಮಯದಲ್ಲಿ ಮದ್ಯ ನಿಷೇಧಾಜ್ಞೆ ಜಾರಿಯಲ್ಲಿದ್ದು ದಿನಾಂಕ 11-04-2023 ರಂದು ಅಬಕಾರಿ ಅಕ್ರಮಗಳ ಪತ್ತೆಗಾಗಿ ನಾನು ಚಾಸಾ 4 ರವರೊಂದಿಗೆ ರಾಣೇಬೆನ್ನೂರು ತಾಲೂಕಿನ ಮೇಡ್ಲೇರಿ ಗ್ರಾಮದಲ್ಲಿ ಗಸ್ತು ಮಾಡುತ್ತಿರುವಾಗ, ಸದರಿ ಗ್ರಾಮದ ಬಸ್ ನಿಲ್ದಾಣದ ಮುಂದೆ ಒಬ್ಬ ವ್ಯಕ್ತಿಯು ತುಂಬಿದ ಚೀಲದೊಂದಿಗೆ ಅನುಮಾನಾಸ್ಪದವಾಗಿ ನಿಂತಿರುವುದನ್ನು ಕಂಡು ಆತನ ಬಳಿ ಹೋಗಿ ವಿಚಾರಿಸಿದಾಗ ಆತ ಗಾಬರಿಯಾಗಿ ತಡವರಿಸುತ್ತಾ ಮದ್ಯದ ಟೆಟ್ರಾ ಪ್ಯಾಕ್ ಗಳು ಇರುವುದಾಗಿ ತಿಳಿಸಿರುತ್ತಾನೆ. ಸದರಿ ವ್ಯಕ್ತಿಯನ್ನು ಪರಿಶೀಲಿಸಲು ಅಲ್ಲಿಯೇ ಇದ್ದ ಚಾ ಸಾ 2 ಮತ್ತು 3 ರವರಿಗೆ ಪ್ರಕರಣದ ಮಾಹಿತಿ ತಿಳಿಸಿ ಪಂಚರನ್ನಾಗಿ ಬರ ಮಾಡಿಕೊಂಡಿದ್ದು ಸದರಿಯವರು ಒಪ್ಪಿರುತ್ತಾರೆ. ಆತನನ್ನು ಹಾಗೂ ಅವರ ಬಳಿ ಇದ್ದ ಚೀಲವನ್ನು ಪರಿಶೀಲಿಸಲು ಸ್ಥಳದಲ್ಲಿ ಶೋಧನಾ ಸಮುಚಿತ ಆಧಾರ ವರದಿಯನ್ನು ತಯಾರಿಸಿ, ಚಾ ಸಾ 2 ಮತ್ತು 3 ರವರ ಸಮಕ್ಷಮ ಪರಿಶೀಲಿಸಲಾಗಿ ಸದರಿ ಚೀಲವು ಬಿಳಿಯ ಪ್ಲಾಸ್ಟಿಕ್ ಗೊಬ್ಬರ ಚೀಲ ಆಗಿದ್ದು, ಅರದಲ್ಲಿ 90 ಮಿಲಿಯ 144

ಹೈವರ್ಡ್ಸ ಚಿಯರ್ಸ ವಿಸ್ಕಿಯ ಟೆಟ್ರಾ ಪ್ಯಾಕೆಟ್‌ಗಳು, 90 ಮಿಲಿಯ 10 ಮ್ಯಾಂಕಿಟೋಶ ವಿಸ್ಕಿಯ ಟೆಟ್ರಾ ಪ್ಯಾಕೆಟ್‌ಗಳು ಇದ್ದು, ಒಟ್ಟು 13.860 ಲೀಟರ್ ನಷ್ಟು ಮದ್ಯವನ್ನು ಹೊಂದಿದ್ದು, ಟೆಟ್ರಾ ಪ್ಯಾಕ್ ಗಳ ಮೇಲಿನ ಭದ್ರತಾ ಚೀಟಿಗಳನ್ನು ಹರಿದು ಹಾಕಲಾಗಿತ್ತು. ಆರೋಪಿಯ ಹೆಸರನ್ನು ವಿಚಾರಿಸಲಾಗಿ ಅವರ ಹೆಸರು ನಾಗರಾಜ ಕಕ್ಕರಗೋಳ, ಯಕ್ಲಾಸಪೂರ ನಿವಾಸಿ ಎಂದು ತಿಳಿಸಿರುತ್ತಾರೆ. ಮದ್ಯದ ಕುರಿತು ಯಾವುದೇ ಮಾಹಿತಿ ನೀಡಲಿಲ್ಲ.

3. ದೊರೆತ ಮದ್ಯವನ್ನು ಹಾಗೂ ಆರೋಪಿಯನ್ನು ಪಂಚರ ಸಮಕ್ಷಮ ಅಮಾನತುಪಡಿಸಿಕೊಳ್ಳಲಾಯಿತು. ಸದರಿ ಮದ್ಯದಿಂದ ರಾಸಾಯನಿಕ ವಿಶ್ಲೇಷಣಾ ಪರೀಕ್ಷೆಗಾಗಿ 90 ಮಿಲಿಯ 20 ಹೈವಡ್ಸ ಚೀಯರ್ಸ ಟೆಟ್ರಾ ಪ್ಯಾಕೆಟ್ ಗಳನ್ನು ಹಾಗೂ 10 ಮ್ಯಾಂಕಿಟೋಶ ವಿಸ್ಕಿಯ ಟೆಟ್ರಾ ಪ್ಯಾಕೆಟ್‌ಗಳನ್ನು ಮಾದರಿ ಮದ್ಯವಾಗಿ ಪ್ರತ್ಯೇಕಿಸಿ ಬಟ್ಟೆಯ ಚೀಲದಲ್ಲಿ ಹಾಕಿ ದಾರದಿಂದ ಕಟ್ಟಿ ಅರಗಿನಿಂದ ಸೀಲ್ ಮಾಡಿ ಸಂಖ್ಯೆ 566 ರಂತೆ ಇಲಾಖಾ ಮೊಹರು ಮಾಡಲಾಯಿತು. ಸ್ಥಳದಲ್ಲಿ ಮಾದರಿ ಚೀಟಿಗಳನ್ನು ತಯಾರಿಸಿ ಅದಕ್ಕೆ ಅಂಟಿಸಿ ನನ್ನ ಹಾಗೂ ಸಾಕ್ಷಿದಾರರ ಸಹಿ ಪಡೆಯಲಾಯಿತು. ಸ್ಥಳದಲ್ಲಿ ಪಂಚರ ಸಮಕ್ಷಮ ಸಂಜೆ 07-20 ರಿಂದ 08-30 ರ ವರೆಗೆ ವರದಿ ಸಿದ್ದಪಡಿಸಿ, ನಾನು ಹಾಗೂ ಪಂಚರು ಸಹಿ ಮಾಡಿರುತ್ತೇವೆ. ಆರೋಪಿಗೆ ಸಿ ಆರ್ ಪಿ ಸಿ ಕಲಂ 41 (ಎ) ರಿತ್ಯ ನೋಟಿಸು ನೀಡಿ ವಿಚಾರಣೆಗೆ ಹಾಜರಾಗುವಂತೆ ತಿಳಿಸಲಾಯಿತು.

4. ಸದರಿ ಅಮಾನತುಪಡಿಸಿಕೊಂಡ ಮದ್ಯ ಹಾಗೂ ವರದಿಯೊಂದಿಗೆ ಕಛೇರಿಗೆ ಬಂದು ಸ್ವ ದೂರು ಸಿದ್ದಪಡಿಸಿ ಆರೋಪಿಯ ವಿರುದ್ದ ಪ್ರಕರಣ ದಾಖಲಿಸಿ, ಪ್ರ ವ ವರದಿಯನ್ನು ಘನ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಕಡತವನ್ನು ಮುಂದಿನ ತನಿಖೆಗಾಗಿ ಚಾ ಸಾ 6 ರವರಿಗೆ ವರ್ಗಾಯಿಸಿರುತ್ತೇನೆ.

5. ದಿನಾಂಕ 11-04-2023 ರ ಶೋಧನಾ ಸಮುಚಿತ ಆಧಾರವನ್ನು **ನಿಪಿ 1 ಎಂದು,** ಅದರಲ್ಲಿನ ಸಾಕ್ಷಿದಾರರ ಸಹಿಯನ್ನು **ನಿಪಿ 1 ಎ** ಎಂದು, ಮಹಜರು ವರದಿಯನ್ನು **ನಿಪಿ 2** ಎಂದು, ಅದರಲ್ಲಿನ ಸಾಕ್ಷಿದಾರರ ಸಹಿಯನ್ನು **ನಿಪಿ 2 ಎ** ಎಂದು, ಸ್ವ ದೂರನ್ನು **ನಿಪಿ 3** ಎಂದು, ಅದರಲ್ಲಿನ ಸಾಕ್ಷಿದಾರರ ಸಹಿಯನ್ನು **ನಿಪಿ 3 ಎ** ಎಂದು, ಪ್ರ ವ ವರದಿಯನ್ನು **ನಿಪಿ 4** ಎಂದು, ಅದರಲ್ಲಿನ ಸಾಕ್ಷಿದಾರರ ಸಹಿಯನ್ನು **ನಿಪಿ 4 ಎ** ಎಂದು ಗುರುತಿಸಲಾಯಿತು. ಮಾದರಿ ಮದ್ಯವನ್ನು ಸಾಕ್ಷಿದಾರರು ನೋಡಿ ಗುರುತಿಸಿದ ಮೇರೆಗೆ ಒಟ್ಟಾಗಿ **ಮು.ಮಾ.1** ಎಂದು ಗುರುತಿಸಲಾಯಿತು.

**ಪಿ ಡಬ್ಲ್ಯೂ 1**

6. ಸಾಕ್ಷಿದಾರರು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ/-

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.